Dr. B. B.HEGDE FIRST GRADE COLLEGE, KUNDAPURA

PROGRAMME REPORT : 2023-24

| Date | Programme | Resource Person |
| --- | --- | --- |
| 04 October 2023 | ಉಪನ್ಯಾಸ - 'ಬರವಣಿಗೆ ಕೌಶಲ' | Sri Shriraj S Acharya Vakwady Journalist |

REPORT:

Kannada Association of Dr. B. B. Hegde First Grade College, Kundapura organised a programme on 'Writing Skills' on 04th october 2023. Literary media should work as a backbone for the unexpressed voice of the society. There should be no untouchability in the eyes of those who claim themselves as a writer. The chief guest Sri Shriraj S Acharya, Journalist expressed his thoughts over the present writers views, caught held the audience with his powerful speech. Prof. K. Umesh Shetty, Principal presided and gave his presidential note. Mr. Chethan Shetty Kovady the Vice-Principal gave away the introductory remarks. Reshma and Ms. Vinaya - the programme co-ordinators were ... ut. Drishitha welcomed, Savina introduced the guest and ... of thanks was given by Nagashree. Keerthi K. Compered the programme.

FACULTY COORDINATOR

PAL

Principal
...gde First Grade College
...dapura -576201

...tice/Invitation/Agenda/Attendance/Feedback/Photos/News Paper cuttings etc.

# ಡಾ| ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜು, ಕುಂದಾಪುರ

( ಕುಂದಾಪುರ ಎಜ್ಯುಕೇಶನ್ ಸೊಸೈಟಿಯ ಅಂಗಸಂಸ್ಥೆ)

## ಕನ್ನಡ ಸಂಘದ

ಆಶ್ರಯದಲ್ಲಿ

## ಉಪನ್ಯಾಸ – 'ಬರವಣಿಗೆ ಕೌಶಲ'

(A Programme under IQAC)

**ದಿನಾಂಕ : ಅಕ್ಟೋಬರ್ 04, 2023** **ಸಮಯ : ಅಪರಾಹ್ನ 3.00**

**ಸ್ಥಳ: ಮೂಕಾಂಬಿಕ ಸಭಾಂಗಣ**

| | | |
|---|---|---|
| ಸಭಾಧ್ಯಕ್ಷತೆ | : | ಪ್ರೊ| ಕೆ. ಉಮೇಶ್ ಶೆಟ್ಟಿ<br>ಪ್ರಾಂಶುಪಾಲರು |
| ಸಂಪನ್ಮೂಲ ವ್ಯಕ್ತಿ | : | ಶ್ರೀ ಶ್ರೀರಾಜ್ ಎಸ್. ಆಚಾರ್ಯ ವಕ್ವಾಡಿ<br>ಯುವ ಪತ್ರಕರ್ತ |
| ಉಪಸ್ಥಿತಿ | : | ಶ್ರೀ ಚೇತನ್ ಶೆಟ್ಟಿ ಕೋವಾಡಿ<br>ಉಪಪ್ರಾಂಶುಪಾಲರು |

**ಸರ್ವರಿಗೂ ಸ್ವಾಗತ ಬಯಸುವ**

ಶ್ರೀಮತಿ ರೇಷ್ಮಾ ಶೆಟ್ಟಿ
ವಿನಯಾ ವಿ. ಶೆಟ್ಟಿ
ಕನ್ನಡ ಸಂಘ ಸಂಯೋಜಕರು

ಶ್ರೀ ಚೇತನ್ ಶೆಟ್ಟಿ ಕೋವಾಡಿ
ಉಪಪ್ರಾಂಶುಪಾಲರು

ಪ್ರೊ| ಕೆ. ಉಮೇಶ್ ಶೆಟ್ಟಿ
ಪ್ರಾಂಶುಪಾಲರು

## Dr. B. B. HEGDE FIRST GRADE COLLEGE, KUNDAPURA








*Principal*
Dr. B.B. Hegde First Grade College
Kundapura -576201

ಜನಪ್ರತಿನಿಧಿ

## ಡಾ. ಬಿ.ಬಿ ಹೆಗ್ಡೆ ಕಾಲೇಜಿನ ಕನ್ನಡ ಸಂಘದಿಂದ ಉಪನ್ಯಾಸ ಕಾರ್ಯಕ್ರಮ

# ಬರೆಯುವುದಕ್ಕೆ ಮುಂದಾಗುವವರ ಕಣ್ಣುಗಳಲ್ಲಿ ಅಸ್ಪೃಶ್ಯತೆ ಇರಬಾರದು : ಶ್ರೀರಾಜ್ ವಕ್ವಾಡಿ



ಎಲ್ಲಿ ಅವ್ಯಕ್ತವನ್ನು ಹೇಳುವಲ್ಲಿ ಸಾಹಿತಿಯೊಬ್ಬ ಸೋಲುತ್ತಾನೋ, ಅಲ್ಲಿ ಉಳಿದದ್ದೆಲ್ಲವೂ ಸೋತಂತೆ. ಇಲ್ಲಿ ಅವ್ಯಕ್ತವಾಗಿರುವ ಧ್ವನಿಗೆ ಹಿಂದಿನ ಎಲುಬಾಗಿ ಸಾಹಿತ್ಯ ಮಾಧ್ಯಮ ಕೆಲಸ ಮಾಡಬೇಕು. ಬರೆಯುವುದಕ್ಕೆ ಮುಂದಾಗುವವರ ಕಣ್ಣುಗಳಲ್ಲಿ ಅಸ್ಪೃಶ್ಯತೆ ಇರಬಾರದು ಎಂದು ಲೇಖಕ, ಪತ್ರಕರ್ತ ಶ್ರೀರಾಜ್ ವಕ್ವಾಡಿ ಅಭಿಪ್ರಾಯ ಪಟ್ಟರು.

ಅವರು ಡಾ. ಬಿ. ಬಿ ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಂಘ ಆಯೋಜಿಸಿದ 'ಬರವಣಿಗೆ ಕೌಶಲ' ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಜಗತ್ತಿನ ಮೇಲ್ಪದರವನ್ನು ತೋರಿಸುವುದಷ್ಟೇ ಸಾಹಿತ್ಯವಲ್ಲ. ಸಾಮಾನ್ಯನಿಗೆ ಕಾಣಿಸದಿರುವುದನ್ನು ಧ್ವನಿಸುವ ಪ್ರಯತ್ನವನ್ನು ಸಾಹಿತ್ಯ ಮಾಡಬೇಕು. ನೋಡುವುದಕ್ಕೆ ನೂರು ಬಗೆಗಳಿದ್ದ ಹಾಗೆ, ಸಾಹಿತ್ಯದ ಸೃಷ್ಟಿಯೂ ನೂರು ಬಗೆಗಳಲ್ಲಿ ಆಗಬೇಕು. ಮನಸ್ಸು ಮತ್ತು ನಿದ್ರೆಯ ನಡುವಿನ ಉದಾಸೀನತೆಯಿಂದ ಎಚ್ಚರಗೊಂಡಾಗ ಜಗತ್ತಿನಲ್ಲಿ ಅದೃಶ್ಯವಾಗಿರುವುದು ಕಾಣಿಸುತ್ತದೆ. ಸಾಹಿತಿಯಾದವನು ಅಂತಹ ವಿಚಾರಗಳನ್ನು ಆಯ್ಕೆ ಮಾಡಿಕೊಳ್ಳುವುದರ ಮೂಲಕ ಜಗತ್ತಿನ ನಡೆಯುತ್ತಿರುವ ತಪ್ಪುಗಳ ವಿರುದ್ಧ ಪ್ರತಿಭಟನೆಯ ಕೂಗಿಗೆ ಜೀವಾಳವಾಗಿ ನಿಲ್ಲಬೇಕು ಎಂದರು.

ಬರವಣಿಗೆಯ ವಿಷಯಗಳ ಆಯ್ಕೆಯಲ್ಲಿಯೇ ತಪ್ಪಾಗುತ್ತಿದೆ. ವಿಷಯಗಳ ಆಯ್ಕೆಯೇ ಬರಹಗಾರರಿಗೆ ಬರಣಿಗೆಯ ಕೌಶಲವನ್ನು ಕಲಿಸಿಕೊಡುತ್ತದೆ. ಪ್ರಸ್ತುತತೆಯ ಸೆಳೆತ ಸಾಹಿತ್ಯಕ್ಕೆ ಮುಖ್ಯ. ಯಾವ ಬರಹ ಪ್ರಸ್ತುತತೆಗೆ ತೆರೆದುಕೊಳ್ಳುವುದಿಲ್ಲವೋ ಅದು ಗೆಲ್ಲುವುದಕ್ಕೆ ಸಾಧ್ಯವಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲ ಪ್ರೊ. ಕೆ. ಉಮೇಶ್ ಶೆಟ್ಟಿ, ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಚಿಂತನೆ ಅಗತ್ಯ. ಸಾಮಾಜಿಕ ಮಾಧ್ಯಮಗಳು ಎಲ್ಲರಿಗೂ ಬರೆಯುವುದಕ್ಕೆ ಅವಕಾಶ ಮಾಡಿಕೊಟ್ಟರೂ, ಅದು ಒಳ್ಳೆಯ ಬರಗಳ ಸೃಷ್ಟಿಗೆ ವೇದಿಕೆಯಾಗಿಲ್ಲ. ಹೊಸ ತಲೆಮಾರು ಬರವಣಿಯ ಕೌಶಲ ಬೆಳೆಸಿಕೊಳ್ಳುವುದಕ್ಕೆ ಇಂತಹ ಉಪನ್ಯಾಸ ವೇದಿಕೆಗಳು ಇನ್ನಷ್ಟು ಸೃಷ್ಟಿಯಾಗುವ ಅನಿವಾರ್ಯತೆಯಿದೆ ಎಂದರು.

ಕಾಲೇಜಿನ ಉಪ ಪ್ರಾಂಶುಪಾಲ ಚೇತನ್ ಶೆಟ್ಟಿ ಕೋವಾಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯಲ್ಲಿ ಕಾರ್ಯಕ್ರಮದ ಸಂಯೋಜಕಿ, ಉಪನ್ಯಾಸಕಿ ರೇಷ್ಮಾ ಶೆಟ್ಟಿ, ವಿನಯಾ ವಿ. ಶೆಟ್ಟಿ, ಕನ್ನಡ ಸಂಘದ ವಿದ್ಯಾರ್ಥಿ ಪ್ರತಿನಿಧಿ ದರ್ಶನ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಾದ ದೃಷಿತಾ ಸ್ವಾಗತಿಸಿ, ನಾಗಶ್ರೀ ಹೆಬ್ಬಾರ್ ವಂದಿಸಿದರು. ಸವಿನಾ ಪರಿಚಯಿಸಿ, ಕಾಲೇಜಿನ ಕನ್ನಡ ಸಂಘದ ವಿದ್ಯಾರ್ಥಿನಿಯರ ಪ್ರತಿನಿಧಿ ಕೀರ್ತಿ ಕೆ. ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.



Principal
Dr. B.B. Hegde First Grade College
Kundapura -576201